**ಎನ್‌ಪಿಎ ಗಳ ಒಂದೇ ಬಾರಿಗೆ ಸಾಲ ಚುಕ್ತಾ– 25,000/– ರೂಪಾಯಿಗಳವರೆಗೆ ಮಂಜೂರಾತಿ ಮಿತಿಗಳನ್ನು ಹೊಂದಿರುವ ಸಣ್ಣ ಸಾಲದ ಖಾತೆಗಳು**

ಬಿಪಿ.ಬಿಸಿ. 53/21.04.117/2001–02 ಡಿಸೆಂಬರ್ 22, 2001

ಸಾರ್ವಜನಿಕ ವಲಯ ಬ್ಯಾಂಕುಗಳ
ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರುಗಳಿಗೆ.

ಮಾನ್ಯರೇ,

**ಅನುತ್ಪಾದಕ ಆಸ್ತಿಯ(ಎನ್‌ಪಿಎ ಗಳ) ಒಂದೇ ಬಾರಿಗೆ ಸಾಲ ಚುಕ್ತಾ– 25,000/– ರೂಪಾಯಿಗಳವರೆಗೆ ಮಂಜೂರಾತಿ ಮಿತಿಗಳನ್ನು ಹೊಂದಿರುವ ಸಣ್ಣ ಸಾಲದ ಖಾತೆಗಳು**

ಸನ್ಮಾನ್ಯ ಹಣಕಾಸು ಮಂತ್ರಿಗಳು ನವೆಂಬರ್ 12, 2001 ರಂದು ನವದೆಹಲಿಯಲ್ಲಿ ಸಾರ್ವಜನಿಕ ವಲಯ ಬ್ಯಾಂಕುಗಳ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರುಗಳೊಂದಿಗೆ ತಾವು ನಡೆಸಿದ ಸಭೆಯಲ್ಲಿ 25,000 ರೂಪಾಯಿಗಳವರೆಗೆ ಬಾಕಿ ಉಳಿದಿರುವ ಸಾಲಗಳಿಗೆ ಸಂಬಂಧಿಸಿದ ಬಾಕಿಗಳ ವಸೂಲಿಗೆ ಬ್ಯಾಂಕುಗಳು ಸೂಕ್ತ ಯೋಜನೆಯನ್ನು ರೂಪಿಸಬೇಕೆಂದು ಸೂಚಿಸಿದರು. ಅದರಂತೆ, ಸಾರ್ವಜನಿಕ ವಲಯ ಬ್ಯಾಂಕುಗಳ ಮಂಡಲಿಗಳು ಈ ಮುಂದಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಎನ್‌ಪಿಎಗಳ ವಸೂಲಿಗೆ ನೀತಿಯೊಂದನ್ನು ರೂಪಿಸಬೇಕು.

2. **(i) ವ್ಯಾಪ್ತಿ**

(ಎ) ಮಾರ್ಚ್ 31, 1998 ರಂದು ಎನ್‌ಪಿಎ ಗಳಾದಂಥ, ವ್ಯವಹಾರದ ಅಥವಾ ಉದ್ದೇಶದ ಸ್ವರೂಪ ಯಾವುದೇ ಇರಲಿ, ಎಲ್ಲ ವಲಯಗಳಲ್ಲಿ ಅಸಲು ಹಣ 25,000 ರೂ ಗಳವರೆಗೆ (ಯಾವುದೇ ಬಡ್ಡಿಯ ಘಟಕಾಂಶವನ್ನು ಹೊರತುಪಡಿಸಿ) ಬಾಕಿ ಇರುವ ಶಿಲ್ಕನ್ನು ಹೊಂದಿರುವ ಎಲ್ಲ ಸಾಲ ಖಾತೆಗಳಿಗೆ ಮಾರ್ಗಸೂಚಿಗಳು ಅನ್ವಯವಾಗುತ್ತವೆ.

(ಬಿ) ಮಾರ್ಗಸೂಚಿಗಳು ದಾವೆ ಹೂಡಿರುವ ಮತ್ತು ಡಿಕ್ರಿ ಆಗಿರುವ ಸಾಲಗಳಿಗೂ ಸಹಾ ಅನ್ವಯವಾಗುತ್ತವೆ. ಇತ್ಯರ್ಥಕ್ಕೆ ಬಂದ ನಂತರ ಬ್ಯಾಂಕುಗಳು ಸಂಬಂಧಪಟ್ಟ ನ್ಯಾಯಾಲಯಗಳಲ್ಲಿ ಮೊಕದಮೆಗಳನ್ನು ಮುಕ್ತಾಯಗೊಳಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬಹುದು.

(ಸಿ) ಆದರೆ, ಯೋಜನೆಯು, ಮೋಸದ, ಅಕೃತ್ಯದ ಮತ್ತು ಉದ್ದೇಶಪೂರ್ವಕ ಸುಸ್ತಿ ಪ್ರಕರಣಗಳನ್ನು ಒಳಗೊಳ್ಳುವುದಿಲ್ಲ.

(ಡಿ) ಮಾರ್ಗಸೂಚಿಗಳು ಜೂನ್ 30, 2002 ರವರೆಗೆ ಪ್ರವರ್ತನೆಯಲ್ಲಿರುತ್ತವೆ.

**(ii) ಸಾಲ ಚುಕ್ತಾ ಸೂತ್ರ– ಮೊಬಲಗು ಮತ್ತು ಗಡುವಿನ ದಿನಾಂಕ**

ಒಪ್ಪಂದದಂತೆ ಪಾವತಿಸಬೇಕಾದ ಮೊಬಲಗು ಈ ಮಾರ್ಗಸೂಚಿಗಳ ಮೇರೆಗೆ ವಸೂಲಿ ಮಾಡತಕ್ಕ, 31 ಮಾರ್ಚ್ 1998 ರಂದು ಸಾಲದ ಖಾತೆಯಲ್ಲಿ ಅಸಲು ಬಾಬಿಗೆ ಬಾಕಿ ಇದ್ದ ಶಿಲ್ಕು ಆಗಿರುತ್ತದೆ. ಮಾರ್ಚ್ 31, 1998 ರಂದು ಬಾಕಿ ಇರುವ ಮೊಬಲಗಿನಲ್ಲಿ ಸೇರಿಸಿರುವ ಮತ್ತು ಮಾರ್ಚ್ 31, 1998ರ ತರುವಾಯ ಬಾಕಿ ಇರುವ ಶಿಲ್ಕಿನ ಮೇಲೆ ಪ್ರಾಪ್ತವಾದ ಯಾವುದೇ ಬಡ್ಡಿಯನ್ನು ಮನ್ನಾ ಮಾಡಲಾಗುವುದು.

**(iii) ಸಂದಾಯ**

ಮೇಲಿನಂತೆ ಮಾಡಿಕೊಂಡ ಮಾಡಿಕೊಂಡ ಒಪ್ಪಂದದಂತೆ ಪಾವತಿಸಬೇಕಾದ ಮೊಬಲಗನ್ನು, ಸಾಮಾನ್ಯವಾಗಿ ಒಂದು ಇಡಿಗಂಟಿನಲ್ಲಿ ಪಾವತಿ ಮಾಡತಕ್ಕದ್ದು. ಅರ್ಹ ಪ್ರಕರಣಗಳಲ್ಲಿ, ಬ್ಯಾಂಕುಗಳು ಒಪ್ಪಂದ ಮಾಡಿಕೊಂಡ ಸಮಯದಲ್ಲಿ ಪಡೆಯಬೇಕಾದ ಕನಿಷ್ಠ ಶೇ 25 ರಷ್ಟು ಮುಂಗಡ ಸಂದಾಯದೊಂದಿಗೆ ಕಂತುಗಳಲ್ಲಿ ಚುಕ್ತಾ ಮಾಡಬೇಕಾದ ಮೊಬಲಗನ್ನು ವಸೂಲಿ ಮಾಡುವ ಬಗ್ಗೆ

ಪರಿಗಣಿಸಬಹುದು. ಉಳಿದ ಹಣವನ್ನು ಒಪ್ಪಂದದ ದಿನಾಂಕದಿಂದ ಒಂದು ವರ್ಷದೊಳಗೆ ವಸೂಲಿ ಮಾಡತಕ್ಕದ್ದು.

**(iv) ಮಂಜೂರಾತಿ ಅಧಿಕಾರ**

ರಾಜಿ ಒಪ್ಪಂದದ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ಅಧಿಕಾರ ಶಾಖೆಯ ವ್ಯವಸ್ಥಾಪಕರಲ್ಲಿ ನಿಹಿತವಾಗಿರುತ್ತದೆ. ಸಾಲವನ್ನು ಸ್ವತಃ ಬ್ಯಾಂಕ್ ವ್ಯವಸ್ಥಾಪಕರೇ ಮಂಜೂರು ಮಾಡಿದ್ದಲ್ಲಿ, ಅಂಥ ಪ್ರಕರಣಗಳಲ್ಲಿ ರಾಜಿ ಒಪ್ಪಂದದ ಬಗ್ಗೆ ನಿರ್ಣಯವನ್ನು, ತರುವಾಯದ ಹಿರಿಯ ಅಧಿಕಾರಿ ತೆಗೆದುಕೊಳ್ಳತಕ್ಕದ್ದು.

**(v) ತಾರತಮ್ಯವಿಲ್ಲದ ವರ್ತನೆ**

ಬ್ಯಾಂಕುಗಳು, ತಮ್ಮಲ್ಲಿರುವ ಎನ್‌ಪಿಎ ಗಳ ಬಗ್ಗೆ ತಾರತಮ್ಯ ಮಾಡದಂತೆ ಅವುಗಳನ್ನು ರಾಜೀ ಒಪ್ಪಂದದಂತೆ ಪಾವತಿಸುವುದಕ್ಕೆ ಮೇಲಿನ ಮಾರ್ಗಸೂಚಿಗಳನ್ನು ಪಾಲಿಸತಕ್ಕದ್ದು.

**(vi) ಕರ್ಯನೀತಿಯನ್ನು ರೂಪಿಸುವುದು**

ಬ್ಯಾಂಕಿನ ನಿರ್ದೇಶಕರ ಮಂಡಲಿಯು, ಮಾರ್ಗಸೂಚಿಗಳ ಅಡಿಯಲ್ಲಿ ಒಳಗೊಂಡಿರುವ ಎನ್‌ಪಿಎಗಳ ಬಗ್ಗೆ ರಾಜಿ ಒಪ್ಪಂದ ಮಾಡಿಕೊಳ್ಳುವ ಕುರಿತು ನೀತಿಯನ್ನು ರೂಪಿಸತಕ್ಕದ್ದು. ಬ್ಯಾಂಕುಗಳು ಒಂದೇ ಬಾರಿಗೆ ಚುಕ್ತಾ ಮಾಡುವುದಕ್ಕೆ ಒಳಪಟ್ಟು ಬಾಕಿಯಿರುವ ಮೊಬಲಗನ್ನು ಪರಿಗಣಿಸುವುದಕ್ಕೆ ತಮ್ಮದೇ ಆದ ಲೆಕ್ಕ ನಿರ್ವಹಣಾ ವಿಧಾನಗಳನ್ನು ಸಹ ರೂಪಿಸಬಹುದು.

**(vii) ಪ್ರಚಾರ**

ಬ್ಯಾಂಕುಗಳು ಈ ಮಾರ್ಗಸೂಚಿಗಳ ಅನ್ವಯ ಅವಧಿ ಮೀರಿ ಉಳಿದಿರುವ ತಮ್ಮ ಬಾಕಿಗಳನ್ನು ಒಂದು ಬಾರಿಗೆ ಚುಕ್ತಾ ಮಾಡುವ ಯೋಜನೆಯ ಅವಕಾಶವನ್ನು ಬಳಸಿಕೊಳ್ಳಲು ಸುಸ್ತಿದಾರರಾಗಿರುವ ಎಲ್ಲ ಅರ್ಹ ಸಾಲಗಾರರಿಗೆ ಯೋಜನೆಯ ಬಗ್ಗೆ ಸೂಕ್ತ ಪ್ರಚಾರ ನೀಡತಕ್ಕದ್ದು.

**(viii) ಮಂಡಲಿಯಿಂದ ಪುನರ್ ಪರಿಶೀಲನೆ**

ಮಾಡಿಕೊಂಡ ಒಪ್ಪಂದದ ಪ್ರಗತಿ ಮತ್ತು ವಿವರಗಳ ಬಗ್ಗೆ ಮಾಸಿಕ ವರದಿಯನ್ನು ಸಂಬಂಧಪಟ್ಟ ಅಧಿಕಾರಿಯು ಮುಂದಿನ ಹಿರಿಯ ಅಧಿಕಾರಿಗೆ ಮತ್ತು ಮುಖ್ಯ ಕಚೇರಿಗೆ ಸಲ್ಲಿಸತಕ್ಕದ್ದು. ಮಾಡಿಕೊಂಡ ರಾಜೀ ಒಪ್ಪಂದವನ್ನು ಮಾಸಿಕ ಅಂತರದಲ್ಲಿ ಮಂಡಲಿಯು ಪುನರ್ ಪರಿಶೀಲಿಸತಕ್ಕದ್ದು.

3. ದಯವಿಟ್ಟು ಸ್ವೀಕೃತಿ ನೀಡಿ

ತಮ್ಮ ವಿಶ್ವಾಸಿ,
(ಎಂ. ಆರ್. ಶ್ರೀನಿವಾಸನ್)
ಮುಖ್ಯ ಪ್ರಧಾನ ವ್ಯವಸ್ಥಾಪಕರು– ಪ್ರಭಾರ